KARN210010042022

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ.**

**:ಉಪಸ್ಥಿತರು:**

**ಶ್ರೀ.ವೆಂಕಟೇಶಪ್ಪ ವಿ., ಬಿ.ಎ. ಎಲ್.ಎಲ್.ಬಿ.**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಪಟ್ಟಣ.**
**ದಿನಾಂಕ 18 ನೇ ಜುಲೈ - 2026 ನೇ ಇಸವಿ**

**ಸಿ.ಸಿ.ಸಂಖ್ಯೆ:494/2022**

**ಪಿರ್ಯಾದುದಾರರು:**

ಸರ್ಕಾರದ ಪರವಾಗಿ:
ಎಂ.ಕೆ ದೊಡ್ಡಿ ಪೊಲೀಸ್ ಠಾಣೆ,
ಎಂ.ಕೆ ದೊಡ್ಡಿ, ಚನ್ನಪಟ್ಟಣ.

**(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**ವಿರುದ್ಧ**

**ಆರೋಪಿತರು :**

ನಾಗರಾಜು
ಬಿನ್ ಲೇಟ್ ಮರಳುಸಿದ್ದಯ್ಯ,
ವಯಸ್ಸು 45 ವರ್ಷ,
**ವಾಸ: ಬೇವೂರು** ಗ್ರಾಮ,
ಮಳೂರು ಹೋಬಳಿ,
ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

**(ಆರೋಪಿತರ ಪರ ಪ್ರತಿನಿಧಿಸುವವರು**
**ಶ್ರೀ.ಎಲ್. ಎ., ವಕೀಲರು)**

| | |
|---|---|
| ತಕ್ಷೀರು ನಡೆದ ದಿನಾಂಕ | 10.02.2022 |
| ತಕ್ಷೀರು ವರದಿ ಮಾಡಿದ ದಿನಾಂಕ | 15.02.2022 |
| ಫಿರ್ಯಾದುದಾರರ ಹೆಸರು | ಶ್ರೀ.ಸರಸ್ವತಿ ಬಿ ಆರ್ |
| ಸಾಕ್ಷಿದಾರರ ಹೇಳಿಕೆಯ ದಿನಾಂಕ | 17.07.2026 |
| ಸಾಕ್ಷಿದಾರರ ಹೇಳಿಕೆಯು ಮುಕ್ತಾಯವಾದ ದಿನಾಂಕ | 17.07.2026 |
| ಅಪಾದಿಸಲಾದ ಅಪಾದನೆಗಳು | ಭಾರತೀಯ ದಂಡ ಸಂಹಿತೆ ಕಲಂ.448, 504, 355, 323, 324, 506, 326. |
| ನ್ಯಾಯಾಲಯದ ತೀರ್ಮಾನ | ನಿರ್ದೋಷಿತರು |

**(ವೆಂಕಟೇಶಪ್ಪ.ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಪಟ್ಟಣ.**

**:: ತೀರ್ಪು::**

ಎಂ.ಕೆ ದೊಡ್ಡಿ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.448, 504, 355, 323, 324, 506, 326 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂದು ಆಪಾದಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರ:**

ದಿನಾಂಕ: 10.02.2022 ರಂದು ಸಂಜೆ 7.30 ಗಂಟೆ ಸಮಯದಲ್ಲಿ ಎಂ.ಕೆ ದೊಡ್ಡಿ ಪೋಲೀಸ್ ಠಾಣಾ ಸರಹದ್ದು ಬೇವೂರು ಗ್ರಾಮದ ಚಾಸಾ-1 ಮತ್ತು

ಚಾಸಾ-2 ರವರು ತಮ್ಮ ಹಿಂಭಾಗದ ಮನೆಯಲ್ಲಿ ಸೈಟಿನಲ್ಲಿದ್ದ ಜೇನು ಕಿತ್ತಿರುವ ವಿಚಾರವಾಗಿ ಮಾತಾನಾಡುತ್ತಾ ಕುಳಿತ್ತಿರುತ್ತಾರೆ. ಆರೋಪಿರವರು ಚಾಸಾ-1 ಮತ್ತು ಚಾಸಾ-2 ರವರ ಮನೆಗೆ ಅಕ್ರಮ ಪ್ರವೇಶ ಮಾಡಿ ಚಾಸಾ-1 ಮತ್ತು ಚಾಸಾ-2 ರವರನ್ನು ಕುರಿತು ಏನೋ ಬೋಳಿ ಮಗನೇ, ಸೂಳೇ ಮಗನೆ ಎಂದು ಬೈಯುತ್ತಾ ಚಪ್ಪಲಿಯಿಂದ ಚಾಸಾ-1 ಮತ್ತು 2 ರವರ ಮೈ ಮೇಲೆ ಹೊಡೆದು, ನಿಮ್ಮ ಅಪ್ಪನ ಜಮೀನಾ ಏನೋ ಸೂಳೆ ಮಗನೆ ಎಂದು ಬೈದು, ಇದು ನನ್ನ ಜಮೀನು, ಈ ಜಮೀನಿನಲ್ಲಿ ಜೇನಾಗಲಿ ಏನೇ ಆಗಲಿ ಕೀಳಿಸುತ್ತೇನೆ ಎಂದು ಚಾಸಾ-1 ರವರ ಮೈ ಮೇಲೆ ಕೈಗಳಿಂದ ಹಲ್ಲೆ ಮಾಡಿ, ನಂತರ ತೆಂಗಿನ ಗೊದಮೊಟ್ಟೆಯಿಂದ ಚಾಸಾ-1 ರವರ ಮೂಗಿನ ಮೇಲೆ ಹೊಡೆದಿರುತ್ತಾರೆ. ಚಾಸಾ-1 ರವರನ್ನು ಬಿಡಿಸಿಕೊಳ್ಳಲು ಚಾಸಾ-2 ರವರು ಬಂದಾಗ ಆರೋಪಿ ಸೂಳೆ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಗೊದಮೊಟ್ಟೆಯಿಂದ ಮೈ ಮೇಲೆ ಹೊಡೆದಿರುತ್ತಾರೆ. ಸೈಟಿನ ವಿಚಾರಕ್ಕೆ ಬಂದರೆ ನಿಮೊಂದು ಗತಿಯನ್ನು ಕಾಣಿಸುತ್ತೇನೆಂದು ಪ್ರಾಣ ಬೆದರಿಕೆಯನ್ನು ಹಾಕಿರುತ್ತಾರೆ. ಘಟನೆಯಿಂದ ಚಾಸಾ-2 ರವರಿಗೆ ಸಾಮಾನ್ಯ ಹಾಗೂ ತೀವ್ರ ಸ್ವರೂಪದ ಗಾಯವಾಗಿರುತ್ತದೆ ಎಂದು ತನಿಖೆಯಿಂದ ದೃಢಪಟ್ಟಿರುತ್ತದೆ ಎಂಬುದು ಅಭಿಯೋಜನೆಯ ಪ್ರಕರಣದ ಸಾರಾಂಶವಾಗಿರುತ್ತದೆ.

**3.** ಆರೋಪಿಯು ವಕೀಲರ ಮುಖಾಂತರ ಹಾಜರಾಗಿ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡು, ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದಂಡ

ಪ್ರಕ್ರಿಯಾ ಸಂಹಿತೆ ಕಲಂ.207 ರ ಪ್ರಕಾರ ಆರೋಪಿತನಿಗೆ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ನ್ಯಾಯಾಲಯವು ಪೂರೈಸಿದ್ದು, ಆರೋಪಿಯ ವಿರುದ್ಧ ಈ ನ್ಯಾಯಾಲಯವು ಮಾಡಲಾದ ದೋಷಾರೋಪಣೆಯು ತಾವು ಯಾವುದೇ ತಪ್ಪನ್ನು ಮಾಡಿಲ್ಲವೆಂದು ಮತ್ತು ಸದರಿ ಮೊಕದ್ದಮೆಯು ವಿಚಾರಣೆಯಾಗಬೇಕೆಂದು ತಿಳಿಸಿದ್ದರಿಂದ ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯು ನಡೆಸಲ್ಪಟ್ಟಿರುತ್ತದೆ.

**4.** ಅಭಿಯೋಜನೆಯ ಪರ ಹಾಜರುಪಡಿಸಿದ 09 ಜನ ಸಾಕ್ಷಿಗಳ ಪೈಕಿ ಸಾಕ್ಷ್ಯ ವಿಚಾರಣೆಯಲ್ಲಿ ಪ್ರಾಸಾ.1 ರವರು ವಿಚಾರಣೆಗೆ ಒಳಪಟ್ಟಿರುತ್ತಾರೆ. ಅಭಿಯೋಜನೆಯ ಪರ ನಿಶಾನೆ.ಪಿ.1 ರಿಂದ ಪಿ.3 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಸದರಿ ಮೊಕದ್ದಮೆಯಲ್ಲಿ ಪ್ರಾಸಾ.1 ರವರ ಸಾಕ್ಷ್ಯವು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲ್ಪಟ್ಟಿರುವುದರಿಂದ, ಆರೋಪಿತನ ವಿರುದ್ಧ ಆರೋಪಿಸಲ್ಪಟ್ಟಿರುವ ಅಪಾದನೆಗಳನ್ನು ಸಾಬೀತು ಪಡಿಸುವ ಯಾವುದೇ ಸಾಕ್ಷ್ಯವು ಇಲ್ಲದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಕೆಳಗಿನ ಪ್ರಕ್ರಿಯೆಗಳನ್ನು ಮನ್ನಾ ಮಾಡಲಾಗಿರುತ್ತದೆ.

**5.** ಆರೋಪಿತನು ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**6.** ಇಬ್ಬರ ಪರ ವಾದವನ್ನು ಕೇಳಿರುತ್ತೇನೆ. ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ.

**7.** ಈ ಪ್ರಕರಣವನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

**:: ಅಂಶಗಳು::**

**1.** **ದಿನಾಂಕಃ 10.02.2022 ರಂದು ಸಂಜೆ 7.30 ಗಂಟೆ ಸಮಯದಲ್ಲಿ ಎಂ.ಕೆ ದೊಡ್ಡಿ ಪೋಲೀಸ್ ಠಾಣಾ ಸರಹದ್ದು ಬೇವೂರು ಗ್ರಾಮದ ಚಾಸಾ-1 ಮತ್ತು ಚಾಸಾ-2 ರವರು ತಮ್ಮ ಹಿಂಭಾಗದ ಮನೆಯಲ್ಲಿ ಸೈಟಿನಲ್ಲಿದ್ದ ಜೇನು ಕಿತ್ತಿರುವ ವಿಚಾರವಾಗಿ ಮಾತಾನಾಡುತ್ತಾ ಕುಳಿತಿದ್ದಾಗ ಆರೋಪಿರವರು ಅಕ್ರಮ ಪ್ರವೇಶ ಮಾಡಿರುತ್ತಾರೆ. ಆದಕಾರಣ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.448 ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?**

**2. ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯು ಚಾಸಾ-1 ಮತ್ತು ಚಾಸಾ-2 ರವರನ್ನು ಕುರಿತು ಏನೋ ಬೋಳಿ ಮಗನೇ, ಸೂಳೀ ಮಗನೆ ಎಂದು ಬೈದು ಇದು ನನ್ನ ಜಮೀನು, ಈ ಜಮೀನಿನಲ್ಲಿ ಜೇನಾಗಲಿ ಏನೇ ಆಗಲಿ ಕೀಳಿಸುತ್ತೇನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆದಕಾರಣ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ.504 ರ ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?**

**3. ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯು ಚಾಸಾ-1 ರವರ ಮೈ ಮೇಲೆ ಕೈಗಳಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ. ಆದಕಾರಣ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ.323 ರ ಪ್ರಕಾರ ಅಪರಾಧ ಮಾಡಿರುತ್ತಾರೆಂದು**

ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?

**4.** ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯು ಚಾಸಾ-1 ರವರಿಗೆ ತೆಂಗಿನ ಗೊದಮೊಟ್ಟೆಯಿಂದ ಹೊಡೆದು ಸಾಮಾನ್ಯ ಹಾಗೂ ತೀವ್ರ ಸ್ವರೂಪದ ರಕ್ತ ಗಾಯವನ್ನುಂಟು ಮಾಡಿರುತ್ತಾರೆ. ಆದಕಾರಣ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.326 ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?

**5.** ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ, ಆರೋಪಿರವರು ತೆಂಗಿನ ಗೊದಮೊಟ್ಟೆಯಿಂದ ಚಾಸಾ-1 ರವರ ಮೂಗಿನ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ. ಆದಕಾರಣ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ.324 ರ ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?

**6.** ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯು ಚಾಸಾ-1 ಮತ್ತು ಚಾಸಾ-2 ರವರಿಗೆ ಈ ಸೈಟಿನ ವಿಚಾರಕ್ಕೆ ಬಂದರೆ ನಿಮೊಂದು ಗತಿಯನ್ನು ಕಾಣಿಸುತ್ತೇನೆಂದು ಪ್ರಾಣ ಬೆದರಿಕೆಯನ್ನು ಹಾಕಿರುತ್ತಾರೆ. ಆದಕಾರಣ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ.506 ರ ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?

**7.** ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ, ಆರೋಪಿ ಸಮಾನ ಉದ್ದೇಶದಿಂದ ಅರೋಪಿಯು ಚಪ್ಪಲಿಯಿಂದ ಚಾಸಾ-1 ಮತ್ತು 2 ರವರ ಮೈ ಮೇಲೆ ಹೊಡೆದು ಅವಮಾನ ಮಾಡಿ ನೋವುಂಟು ಮಾಡಿರುತ್ತಾರೆ. ಆದಕಾರಣ ಆರೋಪಿತರು

ಭಾರತೀಯ ದಂಡ ಸಂಹಿತೆ **ಕಲಂ.355 ರ** ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ**?**

**8. ಮಾಡುವ ಆದೇಶ ಏನು ?**

**8.** ಈ ನ್ಯಾಯಾಲಯವು ವಾದವನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಿ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

| | | |
|---|---|---|
| **ಅಂಶ ಸಂಖ್ಯೆ 1** | **:** | **ನಕರಾತ್ಮಕವಾಗಿ** |
| **ಅಂಶ ಸಂಖ್ಯೆ 2** | **:** | **ನಕರಾತ್ಮಕವಾಗಿ** |
| **ಅಂಶ ಸಂಖ್ಯೆ 3** | **:** | **ನಕರಾತ್ಮಕವಾಗಿ** |
| **ಅಂಶ ಸಂಖ್ಯೆ 4** | **:** | **ನಕರಾತ್ಮಕವಾಗಿ** |
| **ಅಂಶ ಸಂಖ್ಯೆ 5** | **:** | **ನಕರಾತ್ಮಕವಾಗಿ** |
| **ಅಂಶ ಸಂಖ್ಯೆ 6** | **:** | **ನಕರಾತ್ಮಕವಾಗಿ** |
| **ಅಂಶ ಸಂಖ್ಯೆ 7** | **:** | **ನಕರಾತ್ಮಕವಾಗಿ** |
| **ಅಂಶ ಸಂಖ್ಯೆ 8** | **:** | **ಅಂತಿಮ ಆದೇಶದಂತೆ**<br>**ಈ ಕೆಳಕಂಡ ಕಾರಣಗಳಿಗಾಗಿ** |

## ಕಾರಣಗಳು

**9.** **ಅಂಶ ಸಂಖ್ಯೆ 1 ರಿಂದ 7:** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಇವುಗಳನ್ನು ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

**10.** ಈ ಪ್ರಕರಣದಲ್ಲಿ ಅಭಿಯೋಜನೆಯವರು ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.448, 504, 355, 323, 324, 506, 326 ರ ಕೆಳಗೆ

ಅಪರಾಧವೆಸಗಿರುವ ಕುರಿತು ಆರೋಪ ಹೊರಿಸಿದ್ದು, ತಮ್ಮ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ತಮ್ಮ ಪರ ಸಾಕ್ಷ್ಯ ವಿಚಾರಣೆಗಾಗಿ ಒಬ್ಬರು ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ.

**11.** ಚಾಸಾ.1/ಪ್ರಾಸಾ.1 – ಸರಸ್ವತಿ ರವರು ಈ ಪ್ರಕರಣದಲ್ಲಿ ದೂರುದಾರರು ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ಗೊತ್ತು. ಆರೋಪಿಗೂ ಮತ್ತು ನನಗೂ ಬಾಯಿಮಾತಿನ ಜಗಳ ಆಗಿರುತ್ತದೆ. ಆರೋಪಿ ನಮ್ಮ ಮನೆಗೆ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ, ಅವಾಚ್ಯ ಶಬ್ದದಿಂದ ನಿಂದಿಸಿಲ್ಲ, ನನ್ನ ಮೇಲೆ ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ಈ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿರುವುದಾಗಿ ಆ ಸಮಯದಲ್ಲಿ ನಿಶಾನೆ ಪಿ-1 ರ ಮೇಲೆ ಸಹಿಯನ್ನು ಪಡೆದಿದ್ದು, ಪೋಲಿಸರು ನನ್ನ ಸಮಕ್ಷಮ ಮಹಜರ್ ಮಾಡಿಲ್ಲ. ಪೋಲಿಸರು ನನ್ನ ಸಮಕ್ಷಮ ಮುದ್ದೆ ಮಾಲುಗಳನ್ನು ಜಪ್ತು ಮಾಡಿಕೊಂಡಿಲ್ಲ. ನಾನು ಪೋಲಿಸರ ಮುಂದೆ ಮುಂದುವರೆದ ಹೇಳಿಕೆಯನ್ನು ನೀಡಿಲ್ಲ ಎಂದು ಸಾಕ್ಷ್ಯ ನುಡಿದು ಸ್ವತಃ ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಪ್ರಾ.ಸಾ.1 ರವರ ಈ ಮೇಲಿನ ಸಾಕ್ಷ್ಯ ಹೇಳಿಕೆಗಳನ್ನು ಗಮನಿಸಿದಾಗ ಪ್ರಾಸಾ.1 ರವರ ಸಾಕ್ಷ್ಯವು ದೂರಿನಲ್ಲಿರುವ ಎಲ್ಲಾ ವಿಷಯಗಳಿಗೆ ಸಂಪೂರ್ಣ ವ್ಯತಿರಿಕ್ತವಾಗಿರುವುದು ಕಂಡುಬರುತ್ತದೆ. ಸರ್ಕಾರಿ ಅಭಿಯೋಜಕರು ಈ ಮೂಲಕ ಪ್ರತಿಕೂಲ ಸಾಕ್ಷ್ಯವಾಗಿ ಪರಿಗಣಿಸಲಾದ ಪ್ರಾಸಾ.1 ರವರನ್ನು ಪಾಟೀ ಸವಾಲಿಗೆ ಗುರಿಪಡಿಸಿದ್ದರೂ ಸಹ

ಪ್ರಾಸಾ.1 ರವರು ಆರೋಪಿತರ ವಿರುದ್ಧ ಇರುವ ಎಲ್ಲಾ ಆರೋಪಗಳನ್ನು ಸಾರಾಸಗಟಾಗಿ ನಿರಾಕರಿಸಿರುತ್ತಾರೆ. ಈ ಮೂಲಕ ಅಭಿಯೋಜನೆಯವರು ಪ್ರಾಸಾ.1 ರವರ ಪಾಟೀ ಸವಾಲಿನ ಮುಖಾಂತರವೂ ಯಾವುದೇ ಸಾಕ್ಷ್ಯ ಹೇಳಿಕೆಗಳನ್ನು ತಮ್ಮ ಪರ ಪಡೆಯುವಲ್ಲಿ ವಿಫಲರಾಗಿರುತ್ತಾರೆ. ಪ್ರಾಸಾ1 ರವರ ಸಾಕ್ಷ್ಯದ ಮುಖಾಂತರ ಆರೋಪಿತರ ವಿರುದ್ಧ ಇರುವ ಯಾವುದೇ ಆರೋಪಗಳನ್ನು ಸಾಬೀತು ಪಡಿಸುವಲ್ಲಿ ಅಭಿಯೋಜನೆಯವರು ಸ್ಪಷ್ಟ ವೈಫಲ್ಯ ಹೊಂದಿರುವ ಹಿನ್ನಲೆಯಲ್ಲಿ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡುವ ಪ್ರಕ್ರಿಯೆಗಳನ್ನು ಕೈ ಬಿಡಲಾಗಿರುತ್ತದೆ. ಆದ್ದರಿಂದ ಅಭಿಯೋಜನೆಯವರು ಆರೋಪಿತರ ಮೇಲೆ ಅಪಾದಿಸಿದಂತೆ ಆರೋಪಗಳನ್ನು ನಿಸ್ಸಂಶಯವಾಗಿ ಸಾಬೀತು ಪಡಿಸುವಲ್ಲಿ ವಿಫಲರಾಗಿರುತ್ತಾರೆ. ಈ ಮೂಲಕ ಸಂಶಯದ ಲಾಭವನ್ನು ಪಡೆಯಲು ಆರೋಪಿತರು ಅರ್ಹನಾಗಿದ್ದಾನೆಂದು ನ್ಯಾಯಾಲಯವು ಪರಿಗಣಿಸುತ್ತಾ **1 ರಿಂದ 7 ನೇ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.**

**12.** **<u>ಅಂಶ ಸಂಖ್ಯೆ 8:</u>** ಈ ಮೇಲ್ಕಂಡ 1 ರಿಂದ 7 ನೇ ಅಂಶಗಳಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## :: ಆದೇಶ::

**ಆರೋಪಿ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ ಕಲಂ.448, 504, 355, 323, 324, 506, 326 ರಡಿಯಲ್ಲಿನ ದೋಷಾರೋಪಣೆಗಳಿಂದ ನಿರ್ದೋಷಿ ಎಂದು ತೀರ್ಮಾನಿಸಿ, ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಬಿಡುಗಡೆ ಮಾಡಲಾಗಿದೆ.**

**ಆರೋಪಿತರು ಮತ್ತು ಜಾಮೀನುದಾರರು ಈಗಾಗಲೇ ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲಾಗಿದೆ.**

**ಮಾಲು ಪಟ್ಟಿ ಸಂ.12/2022 ಮತ್ತು ಪಿ.ಆರ್.ಸಂ. 152/2022 ರಲ್ಲಿನ 1. ಮೂರು ಅಡಿ ಉದ್ದದ ತೆಂಗಿನ ಗೊದ ಮೊಟ್ಟೆ ಮತ್ತು 2.** ಒಂದು ಬಿಳಿ ಮತ್ತು ನೀಲಿ ಬಣ್ಣದ ಬಲಗಾಲಿನ ಹವಾಯಿ ಚಪ್ಪಲಿಯು ಮೌಲ್ಯರಹಿತವಾಗಿರುವುದರಿಂದ, ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2026 ನೇ** ಇಸವಿ ಜುಲೈ **18 ನೇ** ದಿನಾಂಕದಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಲಾಯಿತು.)

VENKATESHAPPA V

Digitally signed by VENKATESHAPPA V
Date: 2026.07.23 14:48:52 +0530

**(ವೆಂಕಟೇಶಪ್ಪ.ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಪಟ್ಟಣ**

***********

## :: ಅನುಬಂಧ ::

**ಅಭಿಯೋಜನೆಯ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿ:**

ಪ್ರಾಸಾ.1 : ಶ್ರೀ ಸರಸ್ವತಿ ಬಿ ಆರ್

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳ ಪಟ್ಟಿ:**

ನಿಶಾನೆ ಪಿ 1 : ದೂರು

| | | |
|---|---|---|
| ನಿಶಾನೆ ಪಿ 1(ಎ) | : | ಪ್ರಾಸಾ 1 ರವರ ಸಹಿ |
| ನಿಶಾನೆ ಪಿ 2 | : | ಮಹಜರ್ |
| ನಿಶಾನೆ ಪಿ 2(ಎ) | : | ಪ್ರಾಸಾ 1 ರವರ ಸಹಿ |
| ನಿಶಾನೆ ಪಿ 3 | : | ಹೇಳಿಕೆ |

**ಆರೋಪಿಗಳ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿಃ**

-ಇಲ್ಲ-

**ಆರೋಪಿಗಳ ಪರವಾಗಿ ಗುರುತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿಃ**

-ಇಲ್ಲ-

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ಮುದ್ದೆಮಾಲುಗಳುಃ**

-ಇಲ್ಲ-

**(ವೆಂಕಟೇಶಪ್ಪ.ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಪಟ್ಟಣ.**